**ಭಾರತೀಯ ರಿಸರ್ವ್ ಬ್ಯಾಂಕ್**
**ವಿದೇಶಿ ವಿನಿಮಯ ಇಲಾಖೆ**
**ಕೇಂದ್ರ ಕಚೇರಿ**
**ಮುಂಬೈ 400001**

ಮಾರ್ಚ್ 31,2005

ಆರ್ ಬಿ ಐ / 2004-05 / 402
ಎಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ .38

ಗೆ,

ವಿದೇಶಿ ವಿನಿಮಯದಲ್ಲಿ ವ್ಯವಹಾರ ನಡೆಸಲು ಅಧಿಕೃತಗೊಂಡ ಎಲ್ಲಾ ಬ್ಯಾಂಕುಗಳು

**ಮಾನ್ಯರೆ,**

**ನಿವಾಸಿ ವ್ಯಕ್ತಿಗಳಿಗೆ 25,000 ಅಮೆರಿಕಾ ಡಾಲರ್‌ನಷ್ಟು ಉದಾರೀಕೃತ ಹಣ ರವಾನೆ ಯೋಜನೆ**

ಅಧಿಕೃತ ವ್ಯಾಪಾರಿ (ಎಡಿ) ಬ್ಯಾಂಕುಗಳ ಗಮನವನ್ನು ದಿನಾಂಕ ಫೆಬ್ರವರಿ 4, 2004 ರ ಎಪಿ (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ .64 ರ ಪ್ಯಾರಾ 3.4 (ಋ) ರ ಕಡೆಗೆ ಸೆಳೆಯಲಾಗಿದೆ. ಇದರನ್ವಯ ಶೀರೋನಾಮೆಯ ಯೋಜನೆ ಅಡಿಯಲ್ಲಿ ಹಣಕಾಸು ಕ್ರಿಯಾ ಕಾರ್ಯತಂಡವು (ಎಫ್‌ಎಟಿಎಫ್) "ಸಹಕರಿಸದ ದೇಶಗಳು ಮತ್ತು ಪ್ರದೇಶಗಳು" (ಎನ್ ಸಿ ಸಿ ಟಿ) ಎಂದು ಗುರುತಿಸಿರುವ ದೇಶಗಳಿಗೆ ಅಂದರೆ, ಕುಕ್‌ಇಲ್ಯಾಂಡ್, ಈಜಿಪ್ಟ್, ಗ್ವಾಟೆಮಾಲ, ಇಂಡೋನೇಷಿಯಾ, ಮ್ಯಾನ್‌ಮರ್, ನೌರು, ನೈಜೀರೀಯ . ಫಿಲಿಫೈನ್ಸ್ ಮತ್ತು ಉಕ್ರೇನ್ ಈ ದೇಶಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಹಣ ರವಾನೆ ಮಾಡುವುದಕ್ಕೆ ಅನುಮತಿ ನೀಡಲಾಗಿಲ್ಲ.

2. ಈ ಸಂಬಂಧದಲ್ಲಿ ಅಧಿಕೃತ ವ್ಯಾಪಾರಿ ಬ್ಯಾಂಕುಗಳಿಗೆ ಸಹಕರಿಸದ ದೇಶಗಳು ಮತ್ತು ಪ್ರದೇಶಗಳೆಂದು ಎಫ್‌ಎಟಿಎಫ್ ಗುರುತಿಸಿರುವ ದೇಶಗಳ ದಾಖಲೆಯನ್ನು ಇಟ್ಟುಕೊಂಡು ಬರಬೇಕೆಂದು ಮತ್ತು ಅದರಂತೆ, ಉದಾರೀಕೃತ ಹಣ ರವಾನೆ ಯೋಜನೆಯ ಅಡಿಯಲ್ಲಿ ವ್ಯವಹಾರಗಳನ್ನು ನಿರ್ವಹಿಸುವ ತಮ್ಮ ಶಾಖೆಗಳು ಅಗತ್ಯ ಕ್ರಮ ಕೈಗೊಳ್ಳುವುದಕ್ಕಾಗಿ ಅ ಪಟ್ಟಿಯನ್ನು ಕಾಲಕಾಲಕ್ಕೆ ಇಂದೀಕರಿಸಬೇಕೆಂದು ಸಲಹೆ ಮಾಡಲಾಗಿದೆ. ಈ ಉದ್ದೇಶಕ್ಕಾಗಿ ಅವರು ಎಫ್‌ಎಟಿಎಫ್ ಅಧಿಸೂಚಿಸಿರುವ ಸಹಕರಿಸದ ದೇಶಗಳ ಇತ್ತೀಚಿನ ಪಟ್ಟಿಯನ್ನು ಪಡೆಯಲು ವೆಬ್ ಸೈಟ್ ತಿತಿತಿ.ಜಿಚಿಣಜಿ.ಡಿಚಿಜಿಐಡಿಂ ನ್ನು ಪ್ರವೇಸಿಸಬಹುದು.

3. ಅಧಿಕೃತ ವ್ಯಾಪಾರಿ ಬ್ಯಾಂಕುಗಳು ಈ ಸುತ್ತೋಲೆಯಲ್ಲಿನ ಅಂಶಗಳನ್ನು ತಮ್ಮ ಘಟಕಗಳ ಮತ್ತು ಸಂಬಂಧಪಟ್ಟ ಗ್ರಾಹಕರ ಗಮನಕ್ಕೆ ತರತಕ್ಕದ್ದು.

4. ಈ ಸುತ್ತೋಲೆಯಲ್ಲಿರುವ ನಿರ್ದೇಶನಗಳನ್ನು ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ (ಎಫ್‌ಇಎಂಎ), 1999 ( 1999 ರ 42) ಪ್ರಕರಣ 10(4) ಮತ್ತು 11(1) ರ ಮೇರೆಗೆ ಮತ್ತು ಯಾವುದೇ ಇತರ ಕಾನೂನಿನ ಅಡಿಯಲ್ಲಿ ಅಗತ್ಯಪಡಿಸಲಾದ ಅನುಮತಿಗಳು / ಅನುಮೋದನೆಗಳು ಯಾವುವಾದರೂ ಇದ್ದರೆ, ಅವುಗಳಿಗೆ ಬಾಧಕವಾಗದಂತೆ ನೀಡಲಾಗಿದೆ.

**ತಮ್ಮ ವಿಶ್ವಾಸಿ,**

**(ಎಫ್ ಆರ್. ಜೋಸೆಫ್)**
ಮುಖ್ಯ ಪ್ರದಾನ ವ್ಯವಸ್ಥಾಪಕರು